## ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮಾನವಿ

| | |
|---|---|
| CC No. | 463/2025 |

**CW 1 : PW 1**

ದಿನಾಂಕ 11-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

| | |
|---|---|
| ಹೆಸರು | ಅಮರೇಗೌಡ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | PSI, ಅಚ್ಚೊಳ್ಳಿ |
| ವಾಸಸ್ಥಳ | ಅಚ್ಚೊಳ್ಳಿ, ಸಿರಗುಪ್ಪ ತಾಲೂಕ |

**ಮುಖ್ಯ ವಿಚಾರಣೆಃ** ಸ.ಸ.ಅ. ಅವರಿಂದಃ.

ದಿ:07-09-2024 ರಿಂದ 19-08-2025 ರವರೆಗೆ ಸಿರವಾರ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 19-12-2024 ರಂದು ಸಂಃ 4.00 ಗಂಟೆಗೆ ನಾನು ಮತ್ತು ಚಾಸಾ-4, 5 ರವರು ಮಾಚನೂರು ಗ್ರಾಮದ ಹೊರವಲಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ, ಶಾಖಪುರದ ಹೊರವಲಯದಲ್ಲಿರುವ ಗಣದಿನ್ನಿ ಕ್ರಾಸ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮಟ್ಕಾ ಜೂಜಾಟ ನಡೆಯುತ್ತಿದೆ ಎಂದು ಖಚಿತ ಬಾತ್ಮಿ ಬಂದ ಮೇರೆಗೆ ಚಾಸಾ-5 ರವರಿಗೆ ಪಂಚರನ್ನು ಕರೆದುಕೊಂಡು ಬರಲು ಹೇಳಿದಾಗ ಅವರು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದರು. ನಂತರ ನಾನು ಚಾಸಾ-2 ರಿಂದ 5 ಸೇರಿ ನಮ್ಮ ಇಲಾಖಾ ಜೀಪಿನಲ್ಲಿ ಶಾಖಪುರ ಗ್ರಾಮದ ಹೊರವಲಯದಲ್ಲಿ ಹೋಗಿ ಜೀಪು ನಿಲ್ಲಿಸಿ ಕಾಲ್ನಡಿಗೆಯಲ್ಲಿ ಗಣದಿನ್ನಿ ಕ್ರಾಸ್ ಹತ್ತಿರ ಹೋಗಿ, ಮರೆಯಲ್ಲಿ ನಿಂತು ವಾಚ್ ಮಾಡಿದಾಗ ಒಬ್ಬ ವ್ಯಕ್ತಿ ಕೈಯಲ್ಲಿ ಪೆನ್ನು ಪೇಪರ್ ಹಿಡಿದುಕೊಂಡು ಅಲ್ಲಿದ್ದ ಸಾರ್ವಜನಿಕರಿಗೆ 1 ರೂ. ಗೆ ರೂ.80/- ಕೊಡುವ ಕರಾರಿನೊಂದಿಗೆ ಮಟ್ಕಾ ನಂಬರ್ ಬರೆದುಕೊಡುತ್ತಿದ್ದ, ಅದನ್ನು ಖಚಿತ ಪಡಿಸಿಕೊಂಡು

ದಾಳಿ ಮಾಡಿದಾಗ ಮಟ್ಕಾ ಬರೆದುಕೊಡುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದ. ಅವನ ಹೆಸರು ಕೇಳಲಾಗಿ ಬಸಪ್ಪ ತಂದೆ ಬಸಪ್ಪ, 47 ವರ್ಷ, ಸಾ-ಶಾಖಪುರ ಎಂದು ಹೇಳಿದ ಅವನ ಅಂಗ ತಪಾಸಣೆ ಮಾಡಿದಾಗ ಮಟ್ಕಾ ಜೂಜಾಟದ ಹಣ ರೂ.1310/- ಮತ್ತು ಒಂದು ಬಾಲ್ ಪೆನ್ನು ಮತ್ತು ಒಂದು ಮಟ್ಕಾ ಚೀಟಿ ಸಿಕ್ಕಿರುತ್ತದೆ. ಅವುಗಳನ್ನು ಜಪ್ತಿಪಡಿಸಿಕೊಂಡು ಪಂಚನಾಮೆ ಮಾಡಿದ್ದೇನೆ. ಸಿಕ್ಕಿಬಿದ್ದ ಆರೋಪಿಗೆ ಮಟ್ಕಾದ ಹಣ ಮತ್ತು ಚೀಟಿ ಯಾರಿಗೆ ಕೊಡುತ್ತೀ ಎಂದು ಕೇಳಿದಾಗ ಅವನು 2 ನೇ ಆರೋಪಿತನಾದ ಮಯೂರಸ್ವಾಮಿ ತಂದೆ ಗಿಡ್ಡಯ್ಯಸ್ವಾಮಿ ಸಾ: ಜಾಗೀರ್ ವೆಂಕಟಪುರ ದೇವದುರ್ಗ ತಾಲೂಕು ರವರಿಗೆ ಕೊಡುತ್ತೇನೆ ಎಂದು ಹೇಳಿದ. ಅದೇ ದಿನ ಸರಕಾರದ ಪರವಾಗಿ ನಾನು ದೂರು ನೀಡಿದ್ದೇನೆ.

ಈಗ ನಾನು ದೂರನ್ನು ನೋಡುತ್ತಿದ್ದೇನೆ ಅದನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟಿ ಸವಾಲುಃ 2 ನೇ ಆರೋಪಿತನ ಪರ ವಕೀಲರಿಂದ**

ಪಂಚರ ಸಹಿಯನ್ನು ನಾನು ಪಂಚನಾಮೆಯನ್ನು ಠಾಣೆಯಲ್ಲಿ ಪ್ರಿಂಟ್ ತೆಗೆದು ಸಹಿ ಮಾಡಿಸಿರುತ್ತೇನೆ. ನಾನು ಆಪಾದಿತ ದಾಳಿ ಮಾಡಿದಾಗ 2 ನೇ ಆರೋಪಿ ಗುನ್ನೆ ಜಾಗದಲ್ಲಿ ಇರಲಿಲ್ಲ ಎಂದರೆ ಸರಿ. ಆಪಾದಿತ ಗುನ್ನೆ ಜಾಗದಿಂದ 2 ನೇ ಆರೋಪಿಯ ಊರು 25 ಕಿ.ಮೀ. ಇರಬಹುದು ನನಗೆ ಸೂಕ್ತ ಮಾಹಿತಿ ಇಲ್ಲ. ಆ ದಿನ ನಾನು 2 ನೇ ಆರೋಪಿತನಿಗೆ ವಶಕ್ಕೆ ಪಡೆದು ವಿಚಾರಣೆ ಮಾಡಿಲ್ಲ. ಆರೋಪಿತನಿಗೂ, ಮು. ಮಾ. ಸಂಬಂಧಿವಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಜೆ.ಡಿ.ಎಸ್. ಪಕ್ಷದ ಕಾರ್ಯಕರ್ತ ಎಂದರೆ ಗೊತ್ತಿಲ್ಲ. ಮಟ್ಕಾ ಚೀಟಿ ಮೇಲೆ 2 ನೇ ಆರೋಪಿತನಿಗೆ ಹಣ ಮತ್ತು ಚೀಟಿ

ಕೊಡುವ ಬಗ್ಗೆ ನಮೂದು ಇರಲಿಲ್ಲ ಎಂದರೆ ಸರಿ. 2 ನೇ ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರು ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ

ಮಾನವಿ.

## ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮಾನವಿ

| | |
|---|---|
| CC No. | 463/2025 |

**CW 5 : PW 2**

ದಿನಾಂಕ 11-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

| | |
|---|---|
| ಹೆಸರು | ವೀರೇಶ |
| ತಂದೆಯ ಹೆಸರು | ಶಂಕರಗೌಡ |
| ವಯಸ್ಸು | 39 ವರ್ಷ |
| ಉದ್ಯೋಗ | ಪಿ.ಸಿ.316 ಸಿರವಾರ ಪಿ.ಎಸ್. |
| ವಾಸಸ್ಥಳ | ಸಿರವಾರ |

**ಮುಖ್ಯ ವಿಚಾರಣೆಃ** ಸ.ಸ.ಅ. ಅವರಿಂದಃ.

ಕಳೆದ 5 ವರ್ಷಗಳಿಂದ ಸಿರವಾರ ಪೋಲೀಸ್ ಠಾಣೆಯಲ್ಲಿ ಪಿಸಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 19-12-2024 ರಂದು ಸಂಃ 4.00 ಗಂಟೆಗೆ ನಾನು ಮತ್ತು ಚಾಸಾ1, 4 ರವರು ಮಾಚನೂರು ಗ್ರಾಮದ ಹೊರವಲಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ, ಶಾಖಪುರದ ಹೊರವಲಯದಲ್ಲಿರುವ ಗಣದಿನ್ನಿ ಕ್ರಾಸ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮಟ್ಕಾ ಜೂಜಾಟ ನಡೆಯುತ್ತಿದೆ ಎಂದು ಚಾಸಾ-1 ರವರಿಗೆ ಖಚಿತ ಬಾತ್ಮಿ ಬಂದ ಮೇರೆಗೆ ಅವರು ಪಂಚರನ್ನು ಕರೆದುಕೊಂಡು ಬರಲು ಹೇಳಿದಾಗ ನಾನು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದೆ. ನಂತರ ನಾನು, ಚಾಸಾ-1 ರಿಂದ 4 ರವರು ಸೇರಿ ನಮ್ಮ ಇಲಾಖಾ ಜೀಪಿನಲ್ಲಿ ಶಾಖಪುರ ಗ್ರಾಮದ ಹೊರವಲಯದಲ್ಲಿ ಹೋಗಿ ಜೀಪು ನಿಲ್ಲಿಸಿ ಕಾಲ್ನಡಿಗೆಯಲ್ಲಿ ಗಣದಿನ್ನಿ ಕ್ರಾಸ್ ಹತ್ತಿರ ಹೋಗಿ, ಮರೆಯಲ್ಲಿ ನಿಂತು ವಾಚ್ ಮಾಡಿದಾಗ ಒಬ್ಬ ವ್ಯಕ್ತಿ ಕೈಯಲ್ಲಿ ಪೆನ್ನು ಪೇಪರ್ ಹಿಡಿದುಕೊಂಡು ಅಲ್ಲಿದ್ದ ಸಾರ್ವಜನಿಕರಿಗೆ 1 ರೂ. ಗೆ ರೂ.80/- ಕೊಡುವ ಕರಾರಿನೊಂದಿಗೆ ಮಟ್ಕಾ ನಂಬರ್

ಬರೆದುಕೊಡುತ್ತಿದ್ದ, ಅದನ್ನು ಖಚಿತ ಪಡಿಸಿಕೊಂಡು ದಾಳಿ ಮಾಡಿದಾಗ ಮಟ್ಕಾ ಬರೆದುಕೊಡುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದ. ಅವನ ಹೆಸರು ಕೇಳಲಾಗಿ ಬಸಪ್ಪ ತಂದೆ ಬಸಪ್ಪ, 47 ವರ್ಷ, ಸಾ-ಶಾಖಪುರ ಎಂದು ಹೇಳಿದ ಅವನ ಅಂಗ ತಪಾಸಣೆ ಮಾಡಿದಾಗ ಮಟ್ಕಾ ಜೂಜಾಟದ ಹಣ ರೂ.1,310/- ಮತ್ತು ಒಂದು ಬಾಲ್ ಪೆನ್ನು ಮತ್ತು ಒಂದು ಮಟ್ಕಾ ಚೀಟಿ ಸಿಕ್ಕಿರುತ್ತದೆ. ಅವುಗಳನ್ನು ಜಪ್ತಿಪಡಿಸಿಕೊಂಡು ಚಾಸಾ-1, ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿದ್ದಾರೆ. ಸಿಕ್ಕಿಬಿದ್ದ ಆರೋಪಿಗೆ ಮಟ್ಕಾದ ಹಣ ಮತ್ತು ಚೀಟಿ ಯಾರಿಗೆ ಕೊಡುತ್ತೀ ಎಂದು ಕೇಳಿದಾಗ ಅವನು 2 ನೇ ಆರೋಪಿತನಾದ ಮಯೂರಸ್ವಾಮಿ ತಂದೆ ಗಿಡ್ಡಯ್ಯಸ್ವಾಮಿ ಸಾ: ಜಾಗೀರ್ ವೆಂಕಟಪುರ ದೇವದುರ್ಗ ತಾಲೂಕು ರವರಿಗೆ ಕೊಡುತ್ತೇನೆ ಎಂದು ಹೇಳಿದ. ನಾನು ಚಾಸಾ-6 ರವರ ಮುಂದೆ ಹೇಳಿಕೆ ನೀಡಿದ್ದೇನೆ. 1 ನೇ ಆರೋಪಿಯನ್ನು ಮತ್ತು ಮು.ಮಾ. ನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟಿ ಸವಾಲುಃ 2 ನೇ ಆರೋಪಿತನ ಪರ ವಕೀಲರಿಂದ**

ನಾವು ಆಪಾದಿತ ದಾಳಿ ಮಾಡಿದಾಗ 2 ನೇ ಆರೋಪಿ ಗುನ್ನೆ ಜಾಗದಲ್ಲಿ ಇರಲಿಲ್ಲ ಎಂದರೆ ಸರಿ. ಆಪಾದಿತ ಗುನ್ನೆ ಜಾಗದಿಂದ 2 ನೇ ಆರೋಪಿಯ ಊರು 25 ಕಿ.ಮೀ. ಇರಬಹುದು ನನಗೆ ಸೂಕ್ತ ಮಾಹಿತಿ ಇಲ್ಲ. ಆ ದಿನ ಚಾಸಾ-1 ರವರು 2 ನೇ ಆರೋಪಿತನಿಗೆ ವಶಕ್ಕೆ ಪಡೆದು ವಿಚಾರಣೆ ಮಾಡಿಲ್ಲ. ಆರೋಪಿತನಿಗೂ, ಮು. ಮಾ. ಸಂಬಂಧಿವಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಜೆ.ಡಿ.ಎಸ್. ಪಕ್ಷದ ಕಾರ್ಯಕರ್ತ ಎಂದರೆ ಗೊತ್ತಿಲ್ಲ. ಮಟ್ಕಾ ಚೀಟಿ ಮೇಲೆ 2 ನೇ ಆರೋಪಿತನಿಗೆ ಹಣ ಮತ್ತು ಚೀಟಿ ಕೊಡುವ ಬಗ್ಗೆ ನಮೂದು ಇರಲಿಲ್ಲ ಎಂದರೆ ಸರಿ. ನಾನು ಮತ್ತು ಚಾಸಾ-1 ಹಾಗೂ ಚಾಸಾ-6 ಅಂಕಿ ಸಂಖ್ಯೆಗಳಿಗೋಸ್ಕರ 2 ನೇ ಆರೋಪಿ ಯಾವುದೇ ತಪ್ಪು ಮಾಡದೆ ಇದ್ದರು ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ.**

ಹಿ ರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ

ಮಾನವಿ.